ಆದ್ಯತೆಯ ಮೇಲೆ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಇದರ ಬಗ್ಗೆ ಪರಿಶೀಲನೆ ಮಾಡಿ ಏನಾದರೂ ವ್ಯವಸ್ಥೆ ಮಾಡುವ ಉದ್ದೇಶ ಇದೆಯೇ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಸಾರಿಗೆ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೇ, ನಿಮ್ಮ ವರ್ಗಕ್ಕೆ ಆದ್ಯತೆ ಕೊಡಬೇಕು, ಪರವಾನಗಿ ಕೊಡಬೇಕು ಎನ್ನುವುದು ಸರ್ಕಾರದ ಇರಾದೆ ಸೂಕ್ತ ಡ್ರೈವಿಂಗ್ ಲೈಸನ್ಸ್ ಇತ್ಯಾದಿ ಇಟ್ಟುಕೊಂಡು ಬಂದ ಎಸ್.ಸಿ.ಎಸ್.ಟಿ.ಯವರಿಗೆ ಆದ್ಯತೆಯ ಮೇಲೆ ಸರ್ಕಾರದವರು ಪರವಾನಗಿ ಕೊಡುತ್ತಾರೆ.

ಶ್ರೀ ಎಂ. ನಾರಾಯಣ ಸ್ವಾಮಿ:– ಮಾನ್ಯ ಅಧ್ಯಕ್ಷರೇ, ಎಸ್.ಸಿಎಸ್.ಟಿ.ಗೆ ಕೊಡುತ್ತೇವೆಂದು ಹೇಳಿದರು. ಶೇಕಡಾವಾರು ಪ್ರಕಾರ ಎಸ್.ಸಿ.ಗೆ ಎಷ್ಟು ಎಸ್.ಟಿ.ಗೆ ಎಷ್ಟು ? ಇರತಕ್ಕ ತಾರತಮ್ಯವನ್ನು ನಿವಾರಿಸುತ್ತೀರಾ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಮೋಟಾರ್ ವೆಹಿಕಲ್ ಆಕ್ಟ್ ಪ್ರಕಾರ ಇದರಲ್ಲಿ ಈ ರೀತಿ ರಿಜರ್ವೇಷನ್ ಮಾಡುವುದಕ್ಕೆ ಅವಕಾಶವಿಲ್ಲ. ಲೈಸನ್ಸ್ ಕೊಡುವುದು ಡಿಸ್ಟ್ರಿಕ್ಟ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರು. ಅವರು ಸ್ಥಳದ ಅವಶ್ಯಕತೆಯ ಆಧಾರದ ಮೇಲೆ ನೋಡಿ ಕೊಡುತ್ತಾರೆ.

ಶ್ರೀ ಎಂ. ನಾರಾಯಣ ಸ್ವಾಮಿ:– ಮಾನ್ಯ ಅಧ್ಯಕ್ಷರೇ, ನಿರುದ್ಯೋಗಿಗಳಿಗೆ ಆಟೋಗಳನ್ನು ಸಪ್ಲೈ ಮಾಡುತ್ತೇವೆ, ಡ್ರೈವಿಂಗ್ ಲೈಸನ್ಸ್ ಕೊಡುತ್ತೇವೆ. ರಹದಾರಿ ವ್ಯವಸ್ಥೆಯನ್ನು ಕೊಡುತ್ತೇವೆ ಎಂದು ಹೋದ ಅಸೆಂಬ್ಲಿಯಲ್ಲೂ ಕೂಡ ಹೇಳಿಕೆಯನ್ನು ಕೊಟ್ಟಿದೆ. ಆದರೆ ಇದುವರೆಗೂ ಒಂದೂ ಕೂಡ ಮಾಡಲಿಲ್ಲ. ಇದರ ಬಗ್ಗೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ? ಅದನ್ನು ಯಾವಾಗ ಜಾರಿಗೆ ಕೊಡುವ ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಡ್ರೈವಿಂಗ್ ಲೈಸನ್ಸ್ ಕೊಡುವುದು ಸರ್ಕಾರದ ಕೆಲಸ ಅಲ್ಲ. ಡ್ರೈವಿಂಗ್ ಬರುತ್ತದೆ ಎಂದು ರೋಡ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯಿಂದ ಜಿಲ್ಲಾಮಟ್ಟದಲ್ಲಿ ತೋರಿಸಿ ಮೋಟಾರ್ ವೆಹಿಕಲ್ ಇನ್ಸ್‌ಪೆಕ್ಟರ್‌ನಿಂದ ಆ ಲೈಸನ್ಸ್ ತೆಗೆದುಕೊಳ್ಳಬೇಕು. ಅದಾದನಂತರ ಜಿಲ್ಲಾ ಟ್ರಾನ್ಸ್‌ಪೋರ್ಟ್‌ಗೆ ಅರ್ಜಿ ಕೊಡಬೇಕು. ಕಾನೂನಿನ ಪ್ರಕಾರ ಅರ್ಜಿಗಳನ್ನು ಕೊಡಬೇಕಾಗುತ್ತದೆ. ಅದನ್ನು ನಿರುದ್ಯೋಗಿಗಳಿಗೆ ಕೊಡಬೇಕು ಎಂಬ ಉದ್ದೇಶದಿಂದಲೇ ಸಹಸ್ರಾರು ಜನರಿಗೆ ಪದವಾನಗಿಯನ್ನು ಕೊಟ್ಟಿದೆ. ಇದರ ಪರಿಣಾಮವಾಗಿ ಹಾಸನ ಜಿಲ್ಲೆಯಲ್ಲೂ 500 ಆಟೋರಿಕ್ಷಾಗಳಿವೆ. ಇದರಿಂದ ಪೈಪೋಟಿ ಬಂದು ಅನೇಕರಿಗೆ ಆದಾಯ ಕಡಿಮೆ ಬರುತ್ತದೆ. ಇದರಿಂದ ತಮ್ಮ ಜೀವನ ಮಾಡಿಕೊಂಡು ಮಕ್ಕಳು ಮರಿಗಳನ್ನು ನೋಡಿಕೊಳ್ಳುವವರ ತಲೆಯ ಮೇಲೆ ಕಲ್ಲು ಬೀಳದಂತೆ ನೋಡಿಕೊಂಡು, ಹೊಸದಾಗಿ ಪರವಾನಗಿಗಳನ್ನು ವ್ಯವಸ್ಥಿತವಾಗಿ ಕೊಡಬೇಕಾಗುತ್ತದೆ. ಇದು ಒಂದು ವಿಷಚಕ್ರದಂತೆ ಆದ್ದರಿಂದ ಯಾರಿಗೂ ಅನ್ಯಾಯವಾಗದಂತೆ ಎಲ್ಲರಿಗೂ ಅನುಕೂಲವಾಗುವಂತೆ ನೋಡಿ ಮಾಡಬೇಕಾಗುತ್ತದೆ.

ಅಗತ್ಯ ವಸ್ತುಗಳ ಪೂರೈಕೆಯಲ್ಲಿ ಕೊರತೆ

196 (1159): ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ನ್ಯಾಯ ಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳ ಜೊತೆಗೆ ತೈಲ ಮತ್ತು ಸೀಮೆ ಎಣ್ಣೆಗಳ ಪೂರೈಕೆ

ಕೊರತೆಯುಂಟಾಗಿರುವುದು ಹಾಗೂ ಬಡ ಜನತೆಗೆ ಸಾಕಷ್ಟು ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ. ಭಾರತ ಸರ್ಕಾರದಿಂದ ಕಡಿಮೆ ಪೂರೈಕೆಯಿಲ್ಲದೆ ಅಪ್ರಾಮಾಣಿಕ ವ್ಯಾಪಾರಿಗಳು ಪೂರೈಕೆಯಲ್ಲಿ ಕೊರತೆಯುಂಟು ಮಾಡುತ್ತಿರುವ ನಿಂದನೆಗೆ ಗುರಿಯಾಗಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ. ಸಾರ್ವಜನಿಕರ ಕಷ್ಟಗಳನ್ನು ನಿವಾರಿಸಲು ಸರ್ಕಾರವು ಕೈಗೊಂಡ ಯೋಜನೆಯೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಆ. ಇಲ್ಲ.

ಆ. ಕೆಲವು ನ್ಯಾಯ ಬೆಲೆ ಅಂಗಡಿಗಳು ದುರ್ವ್ಯವಹಾರ ನಡೆಸಿದ ಪ್ರಕರಣಗಳಿವೆ. ಇಂತಹ ಲೋಪವೆಸಗಿದ ವರ್ತಕರು, ಕಳ್ಳಸಂತೆಕೋರರು ಮತ್ತು ಅಕ್ರಮ ವ್ಯವಹಾರದಲ್ಲಿ ತೊಡಗಿದವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. 1992ರಲ್ಲಿ 217 ವ್ಯತಕರ ಪರವಾನಗಿಗಳನ್ನು ರದ್ದು ಮಾಡಲಾಗಿದೆ ಮತ್ತೆ 211 ವರ್ತಕರ ಪರವಾನಗಿಗಳನ್ನು ಅಮಾನತ್ತಿನಲ್ಲಿಡಲಾಗಿದೆ.

ಇ. ರಾಜ್ಯಕ್ಕೆ ಆಹಾರ ಧಾನ್ಯಗಳು, ಸಕ್ಕರೆ ಮತ್ತು ಸೀಮೆ ಎಣ್ಣೆಗಳ ಹಂಚಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ತನಿಖೆಗಳನ್ನು ತೀವ್ರಗೊಳಿಸಲಾಗಿದೆ, ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರ ಧಾನ್ಯಗಳ ಸಾರ್ವಜನಿಕ ವಿತರಣೆಯನ್ನು ಪರಿವೀಕ್ಷಿಸಲು ಜಾಗೃತ ಸಮಿತಿಗಳನ್ನು ರಚಿಸಲಾಗಿದೆ.

ಶ್ರೀ ಎ. ಕೆ. ಆನಂತಕೃಷ್ಣ:- ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. (ಇ) ಪ್ರಶ್ನೆಗೆ ರಾಜ್ಯಕ್ಕೆ ಆಹಾರಧಾನ್ಯಗಳು, ಸಕ್ಕರೆ ಮತ್ತು ಸೀಮೆ ಎಣ್ಣೆಗಳ ಹಂಚಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಎಂದು ಹೇಳಿದ್ದಾರೆ. ಕಡಿಮೆ ಇಲ್ಲ ಅಂದ ಮೇಲೆ ಕೇಂದ್ರ ಸರ್ಕಾರದಲ್ಲಿ ಜಾಸ್ತಿ ವಿಷಕ್ಕೆ ಕೇಳಬೇಕು ?

ಶ್ರೀಮತಿ ಮನೋರಮಾ ಮಧ್ವರಾಜ್:- ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ಶ್ರೀ ಪಿ. ಜಿ. ಆರ್. ಸಿಂಧ್ಯರವರು ಈ ಪ್ರಶ್ನೆಯನ್ನು ಹಾಕಿದರು. ತಾವು ಪೂರೈಕೆಯ ಕೊರತೆ ಎಂದು ಹಾಕಿದ್ದೀರಿ. ಪೂರೈಕೆ ಅಂದರೆ ಬರುವ ಸಾಮಾಗ್ರಿಗಳು ಸರಿಯಾದ ಸಮಯಕ್ಕೆ ಬರಲಿಲ್ಲ ಎಂದು ಕೇಳಿದ್ದರೋ ಪೂರೈಕೆ ಎಂದು ಕೇಳಿದ್ದರೋ ಇದು ಸರಿಯಾಗಿ ನಮಗೆ ಅರ್ಥವಾಗಿಲ್ಲ.

ಶ್ರೀ ಎ. ಕೆ. ಆನಂತಕೃಷ್ಣ:- ಅಧ್ಯಕ್ಷರೇ, ಇಂಗ್ಲೀಷಿನಲ್ಲಿ ಇದೆ ಅಂಗಡಿಗಳಲ್ಲಿ ಇಲ್ಲ ಎಂದು ಕನ್ನಡದಲ್ಲಿ ತರ್ಜುಮೆ ಮಾಡುವಾಗ ಅಂಗಡಿಗೆ ಎಂದು ಬಂದಿದೆ. ಅಂಗಡಿ ಒಳಗೆ ಇರುವುದಕ್ಕೂ ಅಂಗಡಿಗೆ ಕೊಡುವುದಕ್ಕೂ ಬಹಳ ವ್ಯತ್ಯಾಸವಾಗುತ್ತದೆ. ನಾನು ಅದನ್ನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ನನಗೆ ತಿಳಿದು ಬಂದ ಹಾಗೆ ಬಹಳ ಕಡಿಮೆ ಅಂಗಡಿಗಳಲ್ಲಿ ಇದೆ. ಜನಕ್ಕೆ ತೊಂದರೆಯಾಗುತ್ತಿದೆ. ಇದನ್ನು ಜನ ಹೇಳುತ್ತಾರೆ, ಅಂಗಡಿಯವರು ಹೇಳುತ್ತಾರೆ. ಆ ವಿಷಯ ನಾನು ಹೇಳಿದೆ ಮೊದಲನೆ ಪ್ರಶ್ನೆಗೆ 'ಇಲ್ಲ' ಎಂದು ಹೇಳಿ ಆರ್‌ಬಿಟ್‌ರರಿಯಾಗಿ ಒಂದು ಆನ್ಸರ್ ಕೊಟ್ಟರು. 3ನೇ (ಈ)ನಲ್ಲಿ ರಾಜ್ಯಕ್ಕೆ ಆಹಾರ ಧಾನ್ಯಗಳು ಸಕ್ಕರೆ, ಮತ್ತು ಸೀಮೆಎಣ್ಣೆ ಹಂಚಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಎಂದು ಹೇಳಿದ್ದಾರೆ. ಇದು ಮೂಲಭೂತವಾದ ಪ್ರಶ್ನೆ. ನಿಮಗೆ ಕೊರತೆ ಇಲ್ಲ ಅಂದ ಮೇಲೆ ಕೇಂದ್ರ ಸರ್ಕಾರವನ್ನು ಕೇಳುವ ಪ್ರಶ್ನೆ ಎಲ್ಲಿಂದ ಬಂತು ? ದಯಮಾಡಿ ಮಾನ್ಯ ಮಂತ್ರಿಗಳು ಕೊರತೆ ಇದೆ ಏನ್ನುವುದನ್ನು ಹೇಳಬೇಕಾಗಿದ್ದರೆ ಮನಸಾರೆ ಅರ್ಥ ಮಾಡಿಕೊಳ್ಳಬೇಕು. ಅದು ಅಲ್ಲಿಂದ ಎಲ್ಲೆಲ್ಲಿಗೆ ವಿಲೇವಾರಿ ಆಗುತ್ತದೆ ಏನೇನು ಆಗುತ್ತದೆ ಮಾನ್ಯ

ಮಂತ್ರಿಗಳಿಗೆ ಗೊತ್ತಿದೆ. ಈ ನಡುವೆ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡುತ್ತಿದ್ದೀರಿ. ಸರ್‌ಪ್ರೈಸ್ ಇನ್ಸ್‌ಪೆಕ್ಷನ್ ಮಾಡುತ್ತಿದ್ದೀರಿ, ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ನಮ್ಮ ಅಭಿನಂದನೆಗಳು ಅವರಿಗೆ ಇದೆ. ಆದರೆ ಅಧಿಕಾರಿಗಳು ಕೊಟ್ಟಂಥ ಉತ್ತರ ನಮಗೆ ಕೊಡುವಂಥ ಪ್ರಯತ್ನ ಇಲ್ಲಿ ಮಾಡುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್:– ಮಾನ್ಯ ಅಧ್ಯಕ್ಷರೇ ನಾನು ಅಧಿಕಾರಿಗಳು ಕೊಟ್ಟಂಥದ್ದನ್ನು ಹೇಳಬೇಕಾಗುತ್ತದೆ. ನಾನು ಉತ್ತರವನ್ನು ತಯಾರು ಮಾಡಿಕೊಡುವುದಕ್ಕೆ ಆಗುವುದಿಲ್ಲ. ಈಗ ನಾನೂ ಕೂಡ ಸರ್‌ಪ್ರೈಸ್ ವಿಸಿಟ್ ಮಾಡುವಾಗ ಜನರ ಒಂದು ಮಾಮೂಲು ಬೇಡಿಕೆ ಎಂದರೆ ಸೀಮೆ ಎಣ್ಣೆ ಸರಿಯಾಗಿ ವಿತರಣೆ ಆಗುವುದಿಲ್ಲ. ಅಲ್ಲಿ ತುಂಬಾ ನ್ಯೂನತೆಗಳು ಇವೆ. ನಾನು ಎಷ್ಟೋ ಲೈಸನ್ಸ್‌ಗಳನ್ನು ಕೂಡ ಕ್ಯಾನ್ಸಲ್ ಮಾಡಿದ್ದೇನೆ. ಅಕ್ಕಿ ಬಗ್ಗೆ ನಾವು ಅಂತರ್ ಜಿಲ್ಲಾ ಸಾಗಾಟ ನಿರ್ಬಂಧವನ್ನು ತೆಗೆದು ಹಾಕಿದ ಮೇಲೆ ಅಕ್ಕಿ ಬೆಲೆ ಕಡಿಮೆಯಾಗಿದೆ. ನಿಮಗಿಂತಲೂ ಕಡಿಮೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಂತೂ ಬಹಳ ಕಡಿಮೆ ಉಂಟು. ಹಾಗೆ ಇರುವಾಗ ದಯವಿಟ್ಟು ತಾವು ಸಹ ಸ್ವಲ್ಪ ಸಹಕರಿಸಬೇಕು. ನಾನೂ ಜನರನ್ನು ಮೀಟ್ ಆಗುತ್ತಿದ್ದೇನೆ. ಹೋದಲೆಲ್ಲ ಕನ್ಫ್ಯೂಮರ್ಸ್ ಬರುತ್ತಿದ್ದಾರೆ. ಅವರನ್ನು ಕೇಳುವಾಗ ಆ ಬಗ್ಗೆ ಏನೂ ತಕರಾರು ಇಲ್ಲ. ಆದರೆ ಸೀಮೆಎಣ್ಣೆ ಬಗ್ಗೆ ಅವ್ಯವಹಾರ ಬಹಳಷ್ಟು ಇದೆ. ಇದನ್ನೆಲ್ಲಾ ನಿಲ್ಲಿಸಬೇಕೆಂದು ನನ್ನ ಒಂದು ಅನಿಸಿಕೆ ಕೂಡ. ದಯವಿಟ್ಟು ಸಹಕರಿಸಿ.

ಶ್ರೀ ಎ. ಕೆ. ಅನಂತಕೃಷ್ಣ:– ಈ ಅವ್ಯವಹಾರ ಕಾರಣಕ್ಕಾಗಿ ಅಂಗಡಿಗಳಲ್ಲಿ ಕೊರತೆ ಆಗುತ್ತಾ ಇದೆ. ತಾವು ಏನು ಕೆಲಸ ಮಾಡುತ್ತಿದ್ದೀರಿ ನಮ್ಮ ಅಭಿನಂದನೆಗಳನ್ನು ಹೇಳುತ್ತೇನೆ. ಆದರೆ ದಯವಿಟ್ಟು ಸ್ಟ್ರಿಕ್ಟ್ ಆಗಿ ಇದನ್ನು ಹ್ಯಾಂಡಲ್ ಮಾಡಬೇಕು.

ರಾಜ್ಯ ಪ್ರಶಸ್ತಿಗಳ ಕುರಿತು

197 (1265): ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗಾ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ 1992ರ ನವೆಂಬರ್ 1ರಂದು ರಾಜ್ಯ ಪ್ರಶಸ್ತಿ ಪಡೆದವರ ಹೆಸರು ವಿಳಾಸ ಮತ್ತು ಕಿರುಪರಿಚಯ ತಿಳಿಸುವುದು ?

ಆ. ರಾಜ್ಯ ಪ್ರಶಸ್ತಿ ನೀಡಲು ಪರಿಗಣಿಸುವ ಅರ್ಹತೆಯ ಅಂಶಗಳಾವುವು ?

ಇ. ಈ ಪ್ರಶಸ್ತಿ ಹಾಗೂ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚವೆಷ್ಟು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು)

ಅ. ಹೆಸರು ಮತ್ತು ವಿಳಾಸ ಹಾಗೂ ಕಿರುಪರಿಚಯದ ಪಟ್ಟಿಯನ್ನು ಸದನದ ಮೇಜಿನ ಮೇಲೆ ಇಡಲಾಗಿದೆ.

ಆ. ಆಯಾ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆ.

ಇ. ರೂ. 20,10,600.00

ಶ್ರೀ ಬಸವರಾಜರಾಯರೆಡ್ಡಿ:– ಅಧ್ಯಕ್ಷರೇ, ಈ ವರ್ಷ ಕರ್ನಾಟಕ ರಾಜ್ಯ ಪ್ರಶಸ್ತಿಗೆ 176ಜನಗಳನ್ನು